ಇನ್ನು ಈ ವಿಷಯವನ್ನು ಮುಂದಕ್ಕೆ ಕೊಂಡು ಹೋಗುವುದು ಬೇಡ ಎಂದುಕೊಂಡು ನರಹರಿ, 'ನಿಮ್ಮ ಮಕ್ಕಳ ಬಗ್ಗೆ ಹೇಳಿ ಸರ್' ಎಂದ.

'ಇಬ್ಬರು ಹುಡುಗರು ಅಂತ ನಿಂಗೊತ್ತು, ಅವರು ಚಿಕ್ಕವರಾಗಿರುವಾಗ ನಾಗಪುರದಲ್ಲಿ ನೀನು ನೋಡಿದ್ದಿ. ಈಗ ಇಬ್ಬರೂ ಇಂಜಿನಿಯರಿಂಗ್ ಓದಿದ್ದಾರೆ. ಹಿರಿಯವನು ಜರ್ಮನಿಯಲ್ಲಿದ್ದಾನೆ, ಕಿರಿಯವನು ಅಮೆರಿಕದಲ್ಲಿದ್ದಾನೆ. ಅಮೆರಿಕದಲ್ಲಿರುವವನು ಯಾವತ್ತೋ ಒಮ್ಮೆ ಬಂದು ಹೋಗುತ್ತಾನೆ. ಜರ್ಮನಿಯಲ್ಲಿರುವವನು ಭಾರತವನ್ನು ಮರೆತೇಬಿಟ್ಟಿದ್ದಾನೆ ಅಂತ ತೋರುತ್ತೆ. ಜರ್ಮನಿಯಲ್ಲಿರುವ ಶಿವಕಾಂತ ಜರ್ಮನಿಯ ಹುಡುಗಿಯನ್ನು ಮದುವೆಯಾಗಿದ್ದಾನೆ. ಅಮೆರಿಕದಲ್ಲಿರುವ ಚಂದ್ರಕಾಂತ ಅಮೆರಿಕನ್ ಹುಡುಗಿಯನ್ನು ಮದುವೆಯಾಗಿದ್ದಾನೆ. ಇಬ್ಬರಿಗೂ ಎರಡು ಗಂಡು ಮಕ್ಕಳು. ನನಗೊಮ್ಮೊಮ್ಮೆ ಅನಿಸುತ್ತೆ, ನರಹರಿ, ಭಾರತದಲ್ಲಿ ಫ್ಯಾಮಿಲಿ ಪ್ಲಾನಿಂಗ್ ಅನ್ನೋದಿರಬಾರದು. ಹುಡುಗರಾಗಿರಲಿ ಹುಡುಗಿಯರಾಗಿರಲಿ, ಇಂಜಿನಿಯರಿಂಗ್ ಮೆಡಿಸಿನ್ ಓದಿಸಿ ಇಡೀ ಜಗತ್ತಿನಲ್ಲಿ ಎಲ್ಲಾ ಕಡೆ ಕಳಿಸಿಬಿಡ್ಬೇಕು' ಎಂದು ನಕ್ಕರು ರಾನಡೆ. ನರಹರಿಯೂ ನಕ್ಕು, 'ಸರ್, ನೀವು ಜರ್ಮನಿಗೆ ಅಮೆರಿಕೆಗೆ ಹೋಗಿಲ್ವ?' ಎಂದ.

'ಹೋಗಿದ್ದೇನೆ ಜರ್ಮನಿಗೆ ಎರಡು ಬಾರಿ, ಅಮೆರಿಕೆಗೆ ಒಂದು ಬಾರಿ' ಎರಡು ಬಾರಿಯೂ ಸುರಭಿ ಮತ್ತು ನಾವು ಒಟ್ಟಿಗೆ ಹೋಗಿದ್ದೇವೆ. ಇನ್ನೊಂದು ಸಲ ಹೋದರೆ ಇಂಗ್ಲೆಂಡಿಗೆ ಹೋಗಿ ಬರ್ಬೇಕು ಅಂತಿರ್ತಾಳೆ ಸುರಭಿ. ಅದು ಸಾಧ್ಯವಾಗುವುದಿಲ್ಲ. ಈಗಲೂ ನಾವಿಬ್ಬರೂ ಇಂಗ್ಲೆಂಡಿಗೆ ಹೋಗಿ ಅಲ್ಲೇ ಏನಾದರೂ ಕೆಲಸ ಮಾಡಿ ಕೆಲವು ವರ್ಷ ಇರಬೇಕು ಎಂಬ ಆಸೆ ಸುರಭಿಯನ್ನು ಕಾಡುತ್ತಾ ಇದೆ' ಎಂದು ಜೋರಾಗಿ ನಕ್ಕರು ಸೂರ್ಯಕಾಂತ ರಾನಡೆ.

'ಈಗ ಸಮಯ ಹೇಗೆ ಕಳೀತೀರಿ ಸರ್?' ನರಹರಿ ಕೇಳಿದ.

ಸ್ವಲ್ಪ ಹೊತ್ತು ಸುಮ್ಮನಿದ್ದು, ರಾನಡೆ ಹೇಳಿದರು, 'ನಾನು ಬಹಳ ಕಾಲದಿಂದ ಫ್ರೀಲಾನ್ಸ್ ಟೀಚರ್ ನರಹರಿ. ಈಗಲೂ ಯಾರಿಗಾದರೂ ಏನಾದರೂ ಕಲಿಸುತ್ತಿರುತ್ತೇನೆ' ಎಂದು ನಕ್ಕು, 'ಆದರೆ ನನ್ನ ಹೆಂಡತಿಗೆ ಕಲಿಸಲು ಆಗಲಿಲ್ಲ' ಎಂದು ಗಟ್ಟಿಯಾಗಿ ನಕ್ಕರು ರಾನಡೆ.

'ಹಾಗಂದ್ರೆ ಏನು ಸರ್?'

'ಹೆಚ್ಚೇನಿಲ್ಲ. ತಮಾಷೆಗಾಗಿ ಹೇಳಿದೆ, ಅವಳ ಇಂಗ್ಲೆಂಡ್ ಮೋಹವನ್ನು ಬಿಡಿಸಲಿಕ್ಕೆ ಆಗ್ಲೇ ಇಲ್ಲ' ಎಂದ ರಾನಡೆ 'ವಿಷಯ ಏನೇ ಆಗಿರಲಿ, ಕಲಿಯಬೇಕಾದ್ದನ್ನು ಕಲಿಸುವುದು ನಂಗೆ ಇಷ್ಟ. ಕಲಿಯುವ ಇಚ್ಛೆಯಿರುವವರಿಗೆ ಕಲಿಸುತ್ತೇನೆ. ಯಾರಾದರೂ ತಾವು ಓದಿದ ಹೈಸ್ಕೂಲಿಗೋ ಕಾಲೇಜಿಗೋ ಕರೆದುಕೊಂಡು ಹೋದರೆ ಕಲಿಸುವ ತಂತ್ರ, ಕಲಿಯುವ ತಂತ್ರಗಳ ಬಗ್ಗೆ ಉಪನ್ಯಾಸ ಮಾಡ್ತೇನೆ'

'ಹೌದು ಸರ್, ನೀವು ಇಂಗ್ಲಿಷ್ ಪಾಠದ ಜೊತೆಗೆ ನಮಗೆ ಏನೆಲ್ಲ ಕಲಿಸುತ್ತಿದ್ದೀರಿ ಅಂತ ನನಗೆ ನೆನಪಿದೆ. ನೀವು ಬರೀ ಗಿಳಿಪಾಠ ಹೇಳುವ ಮೇಸ್ಟ್ರಾಗಿರಲಿಲ್ಲ. ನಿಮ್ಗೆ ಗೊತ್ತಿಲ್ಲದ ವಿಷಯವೇ ಇರಲಿಲ್ಲ. ಕಲಿಕೆಯಲ್ಲ, ಅದು ಜ್ಞಾನದಾಸೋಹವಾಗಿತ್ತು' ಎಂದ ನರಹರಿ.

ನರಹರಿ ಅಮರೇಶ ಮತ್ತು ಸನ್ಮತಿಯನ್ನು ಕರೆದು ನಾಲ್ಕೈದು ವಾಕ್ಯಗಳಲ್ಲಿ ರಾನಡೆಯ ಪರಿಚಯ ಹೇಳಿದ. ಕೂಡಲೇ ಅಮರೇಶ ಮತ್ತು ಸನ್ಮತಿ, 'ಅಯ್ಯೊ ಸರ್, ಯಾರು ಅಂತ ಗೊತ್ತಾಗ್ಲಿಲ್ಲ ಸರ್, ಭಿಕ್ಷುಕ ಅಂದ್ಕೊಂಡ್ಬಿಟ್ವಿ ಸರ್, ಕ್ಷಮಿಸಬೇಕು ಸರ್' ಎಂದು ಇಬ್ಬರೂ ಒಂದೇ ದನಿಯಲ್ಲಿ ಹೇಳಿ ರಾನಡೆಯ ಪಾದ ಮುಟ್ಟಿ ನಮಸ್ಕರಿಸಿದರು.

'ಮರದಡಿಯಲ್ಲಿ ಕೂತಿದ್ದೀರಲ್ಲ ಸರ್. ಬನ್ನಿ ಸರ್ ಒಳಗೆ' ಎಂದಳು ಸನ್ಮತಿ. 'ಕಾಫಿ ಮಾಡು' ಎಂದು ಆಜ್ಞಾಪಿಸಿದ ಅಮರೇಶ.

'ಎರಡು ದಿನ ಇರಿ ಸರ್. ಈಗಲೇ ಹೋಗಲು ನಾನು ಬಿಡುವುದಿಲ್ಲ' ಎಂದ ನರಹರಿ.

'ಹಿಡಿಯಿತು ಗ್ರಹಚಾರ. ಯಾರ್ಯಾರೋ ಹೀಗೆ ಬರ್ತಾ ಇರ್ತಾರೆ. ಈ ಮನುಷ್ಯ ಅವರನ್ನು ನಿಲ್ಲಿಸಿಕೊಂಡು ಯಾಕೆ ಊಟ ಹಾಕ್ತಾನೊ. ಈ ಮುದುಕ ಆ ಮುದುಕನಿಗೆ ಬೇಯಿಸಿ ಹಾಕ್ತಾನೊ, ಅಡುಗೆ ನಾನು ಮಾಡ್ಬೇಕು, ಪಾತ್ರೆ ತೊಳೀಬೇಕು. ಬಹುಶಃ ಈ ಪಿಂಡ ಎಷ್ಟು ದಿವ್ಸ ಝಂಡಾ ಊರ್ತದೊ!' ಸನ್ಮತಿ ಅಮರೇಶನಿಗೆ ಮಾತ್ರ ಕೇಳಿಸುವ ದನಿಯಲ್ಲಿ ಗೊಣಗಿಕೊಂಡಳು ಸನ್ಮತಿ.

'ನಿನ್ನ ಕರ್ಮ! ಮಾಡು. ನಾನು ದಾವಣಗೆರೆಗೆ ಹೋಗಿ ಅಪ್ಪ ಅಮ್ಮನನ್ನು ಕಂಡು ಬರ್ತೇನೆ' ಎಂದು ಪುನಃ ಹೊರಡಲು ಅನುವಾದ ಅಮರೇಶ. 'ಎಷ್ಟು ಸಲ ಹೀಗೆ ಹೊರಡ್ತಾ ಇರ್ತಿ ನೀನು?' ಎಂದು ಗೊಣಗಿಕೊಂಡು ವಿಕಟವಾಗಿ ನಕ್ಕಳು ಸನ್ಮತಿ.

ರಾತ್ರಿ ನರಹರಿ ರಾನಡೆಯನ್ನು ಊಟಕ್ಕೆ ಕರೆದುಕೊಂಡು ಹೋದ. ಹಜಾರದಲ್ಲಿ ಹತ್ತು ಮಂದಿ ಊಟ ಮಾಡಬಹುದಾದಷ್ಟು ವಿಸ್ತಾರವಾದ ಅಂಡಾಕಾರದ ಟೇಬಲಿನ ಒಂದು ಪಕ್ಕದಲ್ಲಿ ನರಹರಿ ಮತ್ತು ರಾನಡೆ ಊಟಕ್ಕೆ ಕುಳಿತರು. ಸನ್ಮತಿ ಮತ್ತು ಅಮರೇಶ ಇಬ್ಬರೂ ಲವಲವಿಕೆಯಿಂದ ಊಟ ಬಡಿಸಿದರು. ಇಬ್ಬರೂ ಉಂಡದ್ದು ಹೆಚ್ಚೆಂದರೆ ಎರಡು ಹಿಡಿ ಅನ್ನ. ನರಹರಿ ಮತ್ತು ರಾನಡೆ ಊಟದ ನಡುವೆ ಮಾತಾಡದೆ ಮೌನವಾಗಿಯೇ ಊಟ ಮಾಡುತ್ತಿದ್ದರು. ನಡುವೆ ಅಮರೇಶ ರಾನಡೆಯೊಡನೆ, 'ಸ್ವಲ್ಪ ಅನ್ನ ಹಾಕ್ಲಾ ಸರ್?' ಎಂದು ಕೇಳಿದ. ತಕ್ಷಣ ಸನ್ಮತಿ ಅಡುಗೆ ಕೋಣೆಯಿಂದ ತುಸು ಏರಿದ ದನಿಯಲ್ಲಿ, 'ನೀನು ಕೇಳಿ ಏನಾಗ್ಬೇಕು? ಬೇಕಿದ್ರೆ ಅವರೇ ಕೇಳೋದಿಲ್ವಾ?' ಎಂದಳು. ಅನಂತರ ಎರಡೇ ನಿಮಿಷದಲ್ಲಿ ರಾನಡೆ ಮತ್ತು ನರಹರಿ ಊಟ ಮುಗಿಸಿದರು.

ನರಹರಿಯ ಪಕ್ಕದ ಕೋಣೆಯಲ್ಲಿ ರಾನಡೆಗೆ ಹಾಸಿಗೆ ಹಾಸಿ, ಹಾಸಿಗೆ ಮೇಲೆ ಹೊದೆಯುವ ಬಟ್ಟೆ ಇರಿಸಿ, 'ನೀರು ಇಟ್ಟಿದ್ದೀನಿ ಸರ್. ಬಿಸಿ ನೀರು ಬೇಕಾದ್ರೆ ಫ್ಲಾಸ್ಕಿನಲ್ಲಿ ಇರಿಸಿದ್ದೀನಿ, ಏನಾದರೂ ಬೇಕಿದ್ರೆ ಸಂಕೋಚ ಬೇಡ. ಬೆಲ್ ಮಾಡಿದ್ರೆ ಬರ್ತೀನಿ' ಪ್ರೀತಿ ಒಸರುವ ದನಿಯಲ್ಲಿ ನುಡಿದಳು ಸನ್ಮತಿ. ರಾನಡೆ ಬಾಗಿಲು ಹಾಕಿಕೊಳ್ಳದೆ ತೆರೆದೇ ಇರಿಸಿಕೊಂಡರು.

ಸನ್ಮತಿ ಮೆಟ್ಟಲಿಳಿದು ಹೋದ ನಂತರ ನರಹರಿ ಮಹಡಿ ಮೇಲೆ ಬಂದು ರಾನಡೆಯ ಕೋಣೆಗೆ ಹೋದ, 'ಏನು ನರಹರಿ?' ರಾನಡೆ ಕೇಳಿದರು. 'ಸರ್, ಏನೋ ಮಾತಾಡ್ಬೇಕಾಗಿತ್ತು ಅಂತ ಬಂದೆ, ನಿದ್ರೆ ಬರ್ತಿದ್ಯೆ ಸರ್?' ಎಂದ ನರಹರಿ. 'ಇಲ್ಲ ನರಹರಿ, ಬಾ ಕೂತ್ಕೊ' ಎಂದರು ರಾನಡೆ. ಐದು ನಿಮಿಷದ ಬಳಿಕ ಸನ್ಮತಿ ನಿಶ್ಶಬ್ದವಾಗಿ ಬೆಕ್ಕಿನ ನಡಿಗೆಯಲ್ಲಿ ಮೇಲಕ್ಕೆ ಬಂದು ಬಾಗಿಲಿನ ಹಿಂದೆ ಗೋಡೆಗೆ ಒರಗಿ ನಿಂತು ಏನು ಮಾತಾಡುತ್ತಾರೊ ಎಂದು ಗೋಡೆಯ ಕಿವಿಯಾದಳು. ನರಹರಿ ಮತ್ತು ರಾನಡೆ ಮಾತಾಡುತ್ತಿದ್ದುದರಲ್ಲಿ ಯಾವುದೂ ಸ್ವಾರಸ್ಯಕರ ಅಂತ ಅನಿಸಲಿಲ್ಲ. ಮೇಲೆ ಬಂದ ಶೈಲಿಯಲ್ಲೇ ಸನ್ಮತಿ ಕೆಳಗೆ ಇಳಿದು ಹೋದಳು.

ಸ್ವಲ್ಪ ಹೊತ್ತು ಯೋಚನೆಯಲ್ಲಿ ಮುಳುಗಿದ್ದ ರಾನಡೆ, 'ನೀನು ಇಷ್ಟು ದೊಡ್ಡ ಮನೆ ಯಾಕೆ ಕಟ್ಟಿಸಿದೆ, ಯಾರಿಗಾಗಿ ಕಟ್ಟಿಸಿದೆ ಅಂತ ಯೋಚಿಸ್ತಾ ಇದ್ದೆ ನರಹರಿ' ಎಂದರು.

'ನಾನು ಯಾವುದೋ ಒಂದು ಭ್ರಮೆಯಲ್ಲಿದ್ದೆ ಸರ್. ನಾನು ಸತತ ಶಾಂತಿ ಸಮಾಧಾನದ ಹುಡುಕಾಟದಲ್ಲಿದ್ದೆ. ಶಾಂತಿ ಸಮಾಧಾನದ ಹೊರತು ಬೇರೆ ಯಾವ ಅಪೇಕ್ಷೆಯೂ ನನಗೆ ಇರಲಿಲ್ಲ. ಈ ಮನೆ ಸುಂದರವಾದ ಪ್ರಕೃತಿಯ ಮಡಿಲಲ್ಲಿ ಒಂದು ಸುಂದರವಾದ ಗೂಡು, ಇಲ್ಲಿ ನಾನು ನನ್ನ ಹೆಂಡತಿ ಮಕ್ಕಳು ಒಂದು ಶಾಂತಿ ಸಮಾಧಾನದಿಂದ ಜೀವಿಸಬಹುದು ಎಂದುಕೊಂಡಿದ್ದೆ. ಅದಕ್ಕೆ ಬೇಕಾದಷ್ಟು ಹಣವೂ ನನ್ನ ಬಳಿ ಇತ್ತು'.

'ಯಾಕೆ ಶಾಂತಿ ಸಮಾಧಾನ ತಾನಾಗಿಯೇ ನಿನಗೆ ಎಂದೂ ಇರಲಿಲ್ಲವೆ?'

'ಇತ್ತು ಸರ್'

'ಅದು ಎಲ್ಲಿಗೆ ಹೋಯಿತು?'

'ಇದು ನಾನು ಯಾರಿಗೂ ಹೇಳುವ ಕತೆಯಲ್ಲ; ಯಾರಿಗೂ ಹೇಳಿದ್ದೂ ಅಲ್ಲ. ಆದರೆ ನಿಮ್ಮ ಪ್ರಶ್ನೆಗೆ ನಾನು ಇದನ್ನು ಹೇಳಲೇ ಬೇಕು' ಎಂದು ಬಹಳ ಹೊತ್ತು ಮೌನವಾಗಿದ್ದು, ನರಹರಿ ಅಪಘಾತದಲ್ಲಿ ತಾಯ್ತಂದೆಯನ್ನು ಕಳೆದುಕೊಂಡ ವಿಚಾರ, ಆ ಅಪಘಾತಕ್ಕೆ ತಾನೇ ಕಾರಣ ಎಂಬ ವಿಚಾರ ವಿವರವಾಗಿ ಹೇಳಿದ.

ಯಾವ ಭಾವವಿಕಾರವೂ ಇಲ್ಲದೆ ಒಂದು ಕತೆ ಎಂಬಂತೆ ನರಹರಿ ಅಪಘಾತದ ಬಗ್ಗೆ ಹೇಳಿದ ರೀತಿ ರಾನಡೆಯವರಲ್ಲಿ ಆಶ್ಚರ್ಯವುಂಟು ಮಾಡಿತು. ಆ ದುರಂತದ ಅನುಭವದಿಂದುಂಟಾದ ಮರೆಯಲಾಗದ ಅನುಭವ ನರಹರಿಯ ಹೃದಯವನ್ನು ಕಲ್ಲಾಗಿಸಿದೆ ಎಂದನಿಸಿತು ರಾನಡೆಗೆ. ನರಹರಿಯಷ್ಟು ಚೆನ್ನಾಗಿ ಓದಿ, ಅಮೆರಿಕೆಯಲ್ಲಿ ದೊಡ್ಡ ಕೆಲಸದಲ್ಲಿದ್ದ ಜ್ಞಾನ ಶ್ರೀಮಂತಿಕೆಯ ಮನುಷ್ಯನಿಗೆ ಏನು ಸಮಾಧಾನ ಹೇಳಲಿ ಎಂದು ಚಿಂತಿಸಿದರು ರಾನಡೆ. ಸಮಾಧಾನ ನೀಡುವ ಮಾತು ಬೇಕಾಗಿಲ್ಲ, ಆದರೆ ಮಾತಿಗೆ ಪ್ರತಿಕ್ರಿಯಿಸದಿರುವುದು ಮಾನವೀಯ ಗುಣವಲ್ಲ. ಆದ್ದರಿಂದ ಲೋಕಾಭಿರಾಮವಾಗಿಯಾದರೂ ಸ್ವಲ್ಪ ಹೊತ್ತು ಮಾತಾಡಬೇಕು